**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 230/2021**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 19.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಕಲ್ಲಯ್ಯ ಮಠಪತಿ |
| ತಂದೆಃ ಗಂಡನ ಹೆಸರು | ಮಲ್ಲಯ್ಯ |
| ಉದ್ಯೋಗ | ಎ ಎಸ್ ಐ |
| ವಯಸ್ಸು | 55 |
| ವಾಸಸ್ಥಳ | ಉಡಗೇರಿ |

**ಪ್ರಾರಂಭ ಸಮಯಃ 12.05 ಪಿ. ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ನಾನು ಜುಲೈ 2019 ರಿಂದ 01.01.2021 ರವರೆಗೆ ಕಲಘಟಗಿ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

ಸಾಕ್ಷಿಗೆ ದಿಃ02.04.2020 ರ ಪಂಚನಾಮೆ ಮತ್ತು ದೂರನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ಮತ್ತು 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ1(ಎ) ಮತ್ತು ನಿಪಿ2(ಎ) ಎಂದು ಗುರುತಿಸಲಾಯಿತು. ಮಾದರಿಯ ಶೀಲು ಮತ್ತು ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ3 ರಿಂದ 8 ಎಂದು ಗುರುತಿಸಲಾಯಿತು.

ದಿಃ02.04.2020 ರಂದು ಬೆಳಿಗ್ಗೆ 06.30 ಗಂಟೆ ಸಮಯದಲ್ಲಿ ನಾನು, ಚಾಸಾ.4 ಮತ್ತು 5 ರವರು ಕಲಘಟಗಿ ಪೊಲೀಸ್ ಠಾಣಾ ವ್ಯಾಪ್ತಿಯ ಹೀರೇಹೊನ್ನಹಳ್ಳಿ ಗ್ರಾಮದಲ್ಲಿ ಗಸ್ತು ಮಾಡುತ್ತಿರುವಾಗ ಸುಮಾರು 07.00 ಗಂಟೆ ಸಮಯದಲ್ಲಿ ಒಬ್ಬ ವ್ಯಕ್ತಿ ಬಿ ಗುಡಿಯಾಳ ಕ್ರಾಸನ ಬಸ್ ನಿಲ್ದಾಣದ ಬಳಿ ಸಾರ್ವಜನಿಕ ಸ್ಥಳದಲ್ಲಿ ಪ್ಲಸ್ಟಿಕ್ ಕವರನಲ್ಲಿ ಸ್ಪಿರಿಟನ್ನು ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದಾನೆಂದು ಬಾತ್ಮಿ ಬಂದ ಮೇರೆಗೆ ಸದರಿ ವಿಚಾರವನ್ನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಅನುಮತಿಯ ಮೇರೆಗೆ ಹೀರೇಹೊನ್ನಹಳ್ಳಿ ಬಸ್ ನಿಲ್ದಾಣದಲ್ಲಿ ಇದ್ದಂತಹ ಪಂಚರಾದಂತಹ ಚಾಸಾ.2 ಮತ್ತು 3 ರವರಿಗೆ ವಿಚಾರವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಅವರು ಒಪ್ಪಿಕೊಂಡ ಮೇರೆಗೆ ಅವರನ್ನು ಕರೆದುಕೊಂಡು ನಾನು, ಚಾಸಾ.4 ಮತ್ತು 5 ರವರು ಸದರಿ ಸ್ಥಳಕ್ಕೆ 07.20 ಗಂಟೆ ಸಮಯಕ್ಕೆ ಹೋದೆವು.

ಸದರಿ ಸ್ಥಳದಲ್ಲಿ ನಾವೆಲ್ಲರೂ ಒಂದು ಜಾಗದಲ್ಲಿ ನಿಂತು ನೋಡುತ್ತಿದ್ದಾಗ ಒಬ್ಬ ಅಸಾಮಿ ಚೀಲದಲ್ಲಿ ಕೈ ಹಾಕಿ ಸ್ಪಿರಿಟ್ ಪ್ಯಾಕೇಟಗಳನ್ನು ಜನರಿಗೆ ಕೊಡುತ್ತಿರುವುದು ನಮಗೆ ಕಂಡು ಬಂದಿದ್ದು, ನಾವು ಸುಮಾರು ಬೆಳಿಗೆ 08.00 ಗಂಟೆ ಸಮಯಕ್ಕೆ ದಾಳಿ ಮಾಡಿದೆವು. ಅಪಾದಿತ ಮತ್ತು ಸಾರ್ವಜನಿಕರು ಹೋಡಿ ಹೋದರು. ಚಾಸಾ.2 ಮತ್ತು 3 ರವರು ಹೋಡಿ ಹೋದಂತಹ ವ್ಯಕ್ತಿಯ ಹೆಸರನ್ನು ಕೇಳಲಾಗಿ ಅವರ ಹೆಸರು ಗಿರಿಮಲ್ಲಯ್ಯ ಕಂಬಿ ಮತ್ತು ರವಿ ಭಜಂತ್ರಿ @ ಪೀರಪ್ಪ ಎಂದು ತಿಳಿಸಿದರು. ನಂತರ ಅಪಾದಿತರ ಬಳಿ ಇದ್ದಂತಹ ಚೀಲವನ್ನು ಪರಿಶೀಲಿಸಲಾಗಿ ಸದರಿ ಚೀಲದಲ್ಲಿ 100 ಎಮ್ ಎಲ್ ನ 158 ಸ್ಪಿರಿಟ್ ಪ್ಯಾಕೇಟಗಳು ಇರುವುದು ಕಂಡು ಬಂದಿತು. ನಂತರ ಸದರಿ ಮಾಲನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಸದರಿ ಮಾಲನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿ ಬಟ್ಟೆಯಲ್ಲಿ ಸುತ್ತಿ ಇಲಾಖಾ ಸೀಲನ್ನು ಹಾಕಲಾಯಿತು. ನಿಪಿ1 ನ್ನು ಸಂಜೆ 08.20 ರಿಂದ 09.20 ರವರೆಗೆ ಪಂಚರು ಹೇಳಿದಂತೆ ಬರೆಯಲಾಯಿತು. ನಂತರ ಪಂಚರ ಸಹಿಗಳನ್ನು ಪಡೆದುಕೊಂಡೆನು.

ನಂತರ ನಾವು ಮಾಲೀನೊಂದಿಗೆ ಪೊಲೀಸ್ ಠಾಣೆಗೆ ಬಂದು ಚಾಸಾ.8 ರವರಿಗೆ ನಿಪಿ1 ರಂತೆ ನಾನು ದೂರು ದಾಖಲಿಸಿದೆನು. ನಿಪಿ2 ಮತ್ತು ಮಾಲನ್ನು ಚಾಸಾ.8 ರವರಿಗೆ ನಿವೇದಿಸಿಕೊಂಡೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸದರಿ ದಿನ ತಪ್ಪಿಸಿಕೊಂಡು ಹೋದಂತಹ 1 ನೇ ಅಪಾದಿತನು ಈ ದಿನ

ನ್ಯಾಯಾಲಯದ ಮುಂದಿರುವ ಅಪಾದಿತನು ಆಗಿರುತ್ತಾನೆ. 2 ನೇ ಅಪಾದಿತನನ್ನು ನೋಡಿದರೇ ಗುರುತಿಸುತ್ತೇನೆ.

**ಪಾಟೀ ಸವಾಲುಃ 1 ನೇ ಅಪಾದಿತನ ಪರ ವಕೀಲರು ಗೈರು ಹಾಜರಿರುವುದರಿಂದ ಮತ್ತು 2 ನೇ ಅಪಾದಿತನ ಪರ ವಕೀಲರು ಪಾಟೀಸವಾಲುಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**